ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಸ್ಥಳಾಂತರಿಸಿರುವುದು.

316(98)

ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಡಳಿತ ಕಛೇರಿಯನ್ನು ಬೆಂಗಳೂರಿನಿಂದ ಯಾವಾಗ ಸ್ಥಳಾಂತರಿಸಲಾಯಿತು?

ಆ) ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಂಡಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೆಶಕರ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

Sri. M.MAHADEV (Minister for Sericulture and Textiles):

ಅ) ನವೆಂಬರ್ 1996ರಲ್ಲಿ ಸ್ಥಳಾಂತರಿಸಲಾಯಿತು.

ಆ) ಆಡಳಿತ ಕಛೇರಿಯನ್ನು ಸ್ಥಳಾಂತರಿಸಿದಾಗ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನೂ ಸಹ ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದ್ದು, ಇವರ ಕಛೇರಿಯು ಹುಬ್ಬಳ್ಳಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ.

ಇ) ಅನ್ವಯಿಸುವುದಿಲ್ಲ.

ಆಲೂರು ಪಟ್ಟಣ ಪಂಚಾಯ್ತಿಗೆ ಸಿಬ್ಬಂದಿ ಕೊರತೆ.

317(109)

ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಆಲೂರು ಪಟ್ಟಣ ಪಂಚಾಯ್ತಿಗೆ ಮಂಜೂರಾದ ಹುದ್ದೆಗಳು ಎಷ್ಟು? ವರ್ಗವಾರು ವಿವರ ನೀಡುವುದು.

ಆ) ಇವುಗಳಲ್ಲಿ ನೇಮಕ ಹೊಂದಿ ಖಾಲಿ ಇರುವ ಹುದ್ದೆಗಳು ಯಾವುವು; ಎಷ್ಟು ವರ್ಷದಿಂದ ಖಾಲಿಯಾಗಿ ಉಳಿದಿವೆ?

ಇ) ಈ ಖಾಲಿ ಹುದ್ದೆಗಳನ್ನು ತುಂಬುವ ಉದ್ದೇಶ ಸರ್ಕಾರಕ್ಕಿದೆಯೆ; ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿಯೇ ಭರ್ತಿಮಾಡಲಾಗುವುದೇ ತಿಳಿಸುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ)	1) ಮುಖ್ಯಾಧಿಕಾರಿ ಶ್ರೇಣಿ2	1
	2) ಹೆಡ್ ಕ್ಲರ್ಕ್ (ಪ್ರ ದ ಸ)	1
	3) ದ್ವಿತೀಯ ದರ್ಜೆ ಸಹಾಯಕ	3
	4) ತೆರಿಗೆ ನಿರೀಕ್ಷಕರು ಶ್ರೇಣಿ-2	1
	5) ಕರ ವಸೂಲಿಗಾರರು (ಕಟ್ಟಡ ತೆರಿಗೆ ಮತ್ತು ನೀರಿನ ಕಂದಾಯ ಮಿಸೆಲೀನಿಯಸ್ ಇತ್ಯಾದಿಗಳಿಗಾಗಿ)	2
	6) ಆರೋಗ್ಯ ನಿರೀಕ್ಷಕರು	1
	7) ಕನ್ಸರೆವೆನ್ಸಿ ಧಪೇಧಾರ್	1
	8) ಪೌರ ಕಾರ್ಮಿಕರು	9
	9) ಕಛೇರಿ ಜವಾನರು	2
ಆ)	1) ಪ್ರಥಮ ದರ್ಜೆ ಸಹಾಯಕರು	1 (5 ವರ್ಷಗಳಿಂದ)
	2) ದ್ವಿತೀಯ ದರ್ಜೆ ಸಹಾಯಕರು	1 (5 ವರ್ಷಗಳಿಂದ)
	3) ತೆರಿಗೆ ನಿರೀಕ್ಷಕರ ಶ್ರೇಣಿ-2	1 - ''-
	4) ಕರ ವಸೂಲಿಗಾರರು (ನೀರಿನ ತೆರಿಗೆ, ಬಾಡಿಗೆ, ಮಿಸೆಲೀನಿಯಸ್)	1 - '' -

5) ಆರೋಗ್ಯ ನಿರೀಕ್ಷಕರು 1 - '' -

6) ಕನ್ಸ್‌ರ್‌ವೆನ್ಸಿ ಧಪೇಧಾರ್ 1 - '' -

7) ಪೌರ ಕಾರ್ಮಿಕರು 5 - '' -

ಇ) ಪ್ರಸ್ತುತ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡಾ 80ರಷ್ಟು ಹುದ್ದೆಗಳನ್ನು ರದ್ದುಗೊಳಿಸಬೇಕೆಂಬುದು ಸರ್ಕಾರದ ತೀರ್ಮಾನವಾಗಿದೆ. ಹೀಗಿದ್ದರೂ ನಗರ : ಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಅತ್ಯಗತ್ಯ ಹುದ್ದೆಗಳನ್ನು ಕನಿಷ್ಠ ಪ್ರಮಾಣದಲ್ಲಿ ಭರ್ತಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಸಕಲೇಶಪುರ ನಗರಸಭೆ ವ್ಯಾಪ್ತಿಯ ಜಮೀನನ್ನು ಬೇರೆಯವರಿಗೆ ಮಂಜೂರು ಮಾಡುವುದು.

318(112)

ಶ್ರೀ ಶಿವಪ್ಪ ಬಿ.ಬಿ.(ಸಕಲೇಶಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ನಗರಸಭೆ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸೇರಿರುವ ಜಮೀನಿನ ವಿಸ್ತೀರ್ಣ ಎಷ್ಟು; ಸರ್ವೆ ನಂಬರ್ ಪ್ರಕಾರ ವಿವರ ನೀಡುವುದು;

ಆ) ಈ ಭೂಮಿಯನ್ನು ನಗರಸಭೆ ಬೇರೆಯವರಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಅದನ್ನು ಖುಲ್ಲಾಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಸಕಲೇಶಪುರ ಕಂದಾಯ ಜಮೀನಿನ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಈ ಕೆಳಕಂಡಂತಿದೆ.